## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1254 |
| ಮಾನ್ಯ ಸದಸ್ಯರ ಹೆಸರು | ಶ್ರೀ ಚಂದ್ರಶೇಖರ ಬಸವರಾಜ ಪಾಟೀಲ್<br>(ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17-03-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಆಳಂದ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಹಾಗೂ ನರ್ಸ್ ಹಾಗೂ ಇತರೆ ಸಿಬ್ಬಂದಿಗಳು ಕಡಿಮೆ ಇರುವುದರಿಂದ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ವೈದ್ಯರು ಹಾಗೂ ನರ್ಸ್ ಮತ್ತು ಸಿಬ್ಬಂದಿಗಳನ್ನು ಭರ್ತಿ ಮಾಡುವ ಕಾರ್ಯ ಸರ್ಕಾರ ಯಾವಾಗ ಕೈಗೊಳ್ಳಲಾಗುವುದು: (ಸಂಪೂರ್ಣ ಮಾಹಿತಿ ನೀಡುವುದು) | ಕಲಬುರಗಿ ಆಳಂದ ಪಟ್ಟಣದಲ್ಲಿರುವ ಸರ್ಕಾರಿ ಆಸ್ಪತ್ರೆಯಲ್ಲಿನ ವೈದ್ಯರು ಮತ್ತು ಸಿಬ್ಬಂದಿಗಳ ಮಂಜೂರು, ಕಾರ್ಯನಿರತ ಮತ್ತು ಖಾಲಿ ಹುದ್ದೆಗಳ ವಿವರಗಳನ್ನು **ಅನುಬಂಧ -1** ನೀಡಲಾಗಿದೆ.<br><br>ಮುಂದುವರೆದು, 05 MBBS ವೈದ್ಯರು ಮತ್ತು 11 ಶುಶ್ರೂಷಾಧಿಕಾರಿಗಳು ಎನ್‌ಹೆಚ್‌ಎಂ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, 11 ಗ್ರೂಪ್ ಡಿ ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದ್ದು, ರೋಗಿಗಳಿಗೆ ಯಾವುದೇ ತೊಂದರೆ ಉಂಟಾಗದಂತೆ ಸೇವಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.<br><br>**ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿಯಿರುವ ತಜ್ಞರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹಾಗೂ ದಂತ ಆರೋಗ್ಯ ಅಧಿಕಾರಿಗಳನ್ನು ನೇಮಕ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:**<br><br>ಇಲಾಖೆಯಲ್ಲಿನ ಖಾಲಿಯಿರುವ 120 ತಜ್ಞ ವೈದ್ಯರು ಹಾಗೂ 100 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯು ಸಹಮತಿ ನೀಡಿದ್ದು, ಸದರಿ ಹುದ್ದೆಗಳನ್ನು ನಿಯಮಾನುಸಾರ ನೇರ ನೇಮಕಾತಿಯಡಿಭರ್ತಿಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ.<br><br>The Karnataka compulsory service by candidates completed Medical courses Act, 2012 ಹಾಗೂ ಕಾಲಕಾಲಕ್ಕೆ ಮಾಡಲಾದ ತಿದ್ದುಪಡಿ ಕಾಯ್ದೆ ಹಾಗೂ ಇದರಡಿ ರಚಿಸಲಾದ ನಿಯಮದಡಿ ಎಂ.ಬಿ.ಬಿ.ಎಸ್.,/ಸ್ನಾತಕೋತ್ತರ ಪದವಿ ಪೂರೈಸಿ ಬರುವ ವೈದ್ಯರಿಗೆ ಒಂದು ವರ್ಷದ ಕಡ್ಡಾಯ ಸೇವೆಗೆ ನೇಮಿಸಲಾಗುತ್ತಿದೆ.<br><br>ಇಲಾಖೆಯಲ್ಲಿ ಸೇವಾನಿರತ ಕೋಟಾ ಅಡಿಯಲ್ಲಿ ಉನ್ನತ ವ್ಯಾಸಂಗಕ್ಕೆ ತೆರಳಿ, ವ್ಯಾಸಂಗವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಹಿಂದಿರುಗುವ ವೈದ್ಯರಿಗೆ ಅವರು ಹೊಂದುವ ತಜ್ಞತೆಯ ಹುದ್ದೆಗೆ ನೇಮಿಸಲಾಗುತ್ತಿದೆ.<br><br>ಆದೇಶ ಸಂಖ್ಯೆ : ಆಕುಕ 619 ಹೆಚ್‌ಎಸ್‌ಹೆಚ್ 2022, ದಿನಾಂಕ : 17/01/2024 ಹಾಗೂ 11/03/2024ರಲ್ಲಿ ಇಲಾಖೆಯಲ್ಲಿ ಖಾಲಿಯಿರುವ 337 ತಜ್ಞ ವೈದ್ಯರು ಮತ್ತು 250 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕೆಲವೊಂದು ಷರತ್ತುಗಳಿಗೆ ಒಳಪಡಿಸಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ.<br><br>ಸುತ್ತೋಲೆ ಸಂಖ್ಯೆ : ಆಕುಕ 21 ಹೆಚ್‌ಎಸ್‌ಹೆಚ್ 2025, ದಿನಾಂಕ : 08/01/2025 ಮತ್ತು ಸೇರ್ಪಡೆ ಸಂಖ್ಯೆ : HFW/1/PRS/2025, ದಿನಾಂಕ : 25/01/2025 ಹಾಗೂ ಪತ್ರ ಸಂಖ್ಯೆ 29/01/2025ರಲ್ಲಿ, ಒಟ್ಟಾರೆಯಾಗಿ 250 ಮಿತಿಯಲ್ಲಿ ಅಗತ್ಯಕ್ಕನುಗುಣವಾಗಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ/ತುರ್ತು ಚಿಕಿತ್ಸಾ ವೈದ್ಯಾಧಿಕಾರಿ/ ಹಿರಿಯ ವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅನುಮತಿ ನೀಡಲಾಗಿದೆ.<br><br>ಆದೇಶ ಸಂಖ್ಯೆ : ಆಕುಕ 1072 ಹೆಚ್‌ಎಸ್‌ಹೆಚ್ 2024, ದಿನಾಂಕ : 01/01/2025ರಲ್ಲಿ, ಇಲಾಖೆಯಲ್ಲಿ Hiring on per day basis, |

Hiring at AB-Ark rates & Hiring for per-case basis ವಿಧಾನದಡಿ ತಜ್ಞ ವೈದ್ಯರ ಸೇವೆಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಆದೇಶ ಸಂಖ್ಯೆ : ಆಕುಕ 87 ಸಿಜಿಇ 2025, ದಿನಾಂಕ : 21/02/2025ರಲ್ಲಿಇಲಾಖೆಯಲ್ಲಿನ 08 ದಂತ ಆರೋಗ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಅನುಮತಿ ನೀಡಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿಯಿರುವ ಈ ಕೆಳಕಂಡ ಅರೆ ವೈದ್ಯಕೀಯ ಹುದ್ದೆಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ಪ್ರಸ್ತುತ ಅಭ್ಯರ್ಥಿಗಳ ಮೂಲ ದಾಖಲೆಗಳ ಪರಿಶೀಲನೆಯು ಪೂರ್ಣಗೊಂಡಿದೆ.

| ಕ್ರ ಸಂ | ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1 | ಫಾರ್ಮಸಿ ಅಧಿಕಾರಿ | 400 |
| 2 | ಕಿರಿಯ ವೈದ್ಯಾಧಿಕಾರಿ, ಪ್ರಯೋಗ ಶಾಲಾ ತಾಂತ್ರಿಕ ಅಧಿಕಾರಿ | 150 |
| 3 | ವಿಕಿರಣ ಶಾಸ್ತ್ರ ಚಿತ್ರಣ ಅಧಿಕಾರಿ | 08 |
| | ಒಟ್ಟು | **558** |

ಸರ್ಕಾರದ ಪತ್ರ ಸಂಖ್ಯೆ : ಆಕುಕ 103 ಹೆಚ್‌ಎಸ್‌ಎಂ 2019, ದಿನಾಂಕ : 03/02/2024ರಲ್ಲಿ ಇಲಾಖೆಯಲ್ಲಿ ಖಾಲಿ ಇರುವ 200 ಕಿರಿಯ ಪ್ರಯೋಗಶಾಲಾ ತಾಂತ್ರಿಕ ಅಧಿಕಾರಿ ಹಾಗೂ 400 ಫಾರ್ಮಸಿ ಅಧಿಕಾರಿಗಳನ್ನು ನೇರ ನೇಮಕಾತಿಯಡಿ ಭರ್ತಿ ಮಾಡುವವರೆಗೆ ಜಿಲ್ಲಾ ಮಟ್ಟದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿನ ಖಾಲಿಯಿರುವ ಒಟ್ಟು 320 ವಿವಿಧ ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಸಂ: HFW 709 HSM 2017, ದಿನಾಂಕ : 17.05.2022 ರಲ್ಲಿ ವಿಶೇಷ ನೇಮಕಾತಿ ಸಮಿತಿ ಮೂಲಕ ಭರ್ತಿ ಮಾಡಲು Online ನಲ್ಲಿ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಹ ಅಭ್ಯರ್ಥಿಗಳ ದಾಖಲಾತಿ ಪರಿಶೀಲನಾ ಕಾರ್ಯ ಪೂರ್ಣಗೊಂಡಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸುವ ಹಂತದಲ್ಲಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿನ ಕಲ್ಯಾಣ ಕರ್ನಾಟಕ ವೃಂದದಲ್ಲಿನ ಸಹಾಯಕ ಕೀಟ ಶಾಸ್ತ್ರಜ್ಞರ ಹುದ್ದೆಯನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಿದ್ದು, ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಖಾಲಿಯಿರುವ ಹುದ್ದೆಯನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಮುಂದುವರೆದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಮಂಜೂರಾಗಿ ಖಾಲಿಯಿರುವ 1205 ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ (ANM's) ಮತ್ತು 300 ಆರೋಗ್ಯ ನಿರೀಕ್ಷಣಾಧಿಕಾರಿ (HIO's) ಹುದ್ದೆಗಳನ್ನು ಕೆಲವೊಂದು ಷರತ್ತಿಗೊಳಪಟ್ಟು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಲು ಸರ್ಕಾರದ ಆದೇಶ ಸಂಖ್ಯೆ: ಆಕುಕ 333 ಹೆಚ್‌ಎಸ್‌ಎಂ 2023, ದಿನಾಂಕ: 21/12/2024ರಂದು ಅನುಮೋದನೆ ನೀಡಲಾಗಿರುತ್ತದೆ.

ಖಾಲಿಯಿರುವ ಹುದ್ದೆಗಳಲ್ಲಿ ಗ್ರೂಪ್-ಡಿ ಹುದ್ದೆಗಳನ್ನು ಆದೇಶ ಸಂಖ್ಯೆ: ಆಕುಕ 01 ಸಿಜಿಎಂ 2019, ದಿನಾಂಕ. 24.06.2019ರಲ್ಲಿ ನೀಡಿರುವ ಅನುಮತಿಯಂತೆ ಶೇ. 30 ರಷ್ಟು Non-Clinical ಗ್ರೂ ಶೇ.45 ರಷ್ಟು ಗ್ರೂಪ್-ಡಿ ಹುದ್ದೆಗಳನ್ನು ಒಟ್ಟಾರೆಯಾಗಿ ಶೇ.75ರಷ್ಟು ಮೀರದಂತೆ ಹೊರಗುತ್ತಿಗೆ ಮೂಲಕ ಟೆಂಡರ್ ಆಹ್ವಾನಿಸಿ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಿಗೆ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ನೇಮಕಾತಿ ಮಾಡಿಕೊಳ್ಳಲಾಗುತ್ತದೆ.

ಇಲಾಖೆಯಲ್ಲಿ ಕಾಲಕಾಲಕ್ಕೆ ಖಾಲಿಯಾಗುವ ಹುದ್ದೆಗಳನ್ನು ನಿಯಮಾನುಸಾರ ನೇರ ನೇಮಕಾತಿ, ಮುಂಬಡ್ತಿ, ಗುತ್ತಿಗೆ ಆಧಾರದಡಿ, ವರ್ಗಾವಣೆ ಮೂಲಕ ಭರ್ತಿ ಮಾಡುವ ಮೂಲಕ ಆಸ್ಪತ್ರೆಗಳಿಗೆ ಬರುವ

<table>
<tr><td></td><td></td><td>ರೋಗಿಗಳಿಗೆ ಉತ್ತಮ ಸೇವೆ ನೀಡಲಾಗುತ್ತಿದೆ.</td></tr>
<tr><td>ಆ)</td><td>ಸದರಿ ಸರ್ಕಾರಿ ಆಸ್ಪತ್ರೆಯಲ್ಲಿ ಯಾವ ಯಾವ ಖಾಯಿಲೆಗೆ ಸಂಬಂಧಿಸಿದ ನುರಿತ ವೈದ್ಯರು ಕಾರ್ಯನಿರ್ವಹಿಸುತ್ತಿದ್ದಾರೆ; ಕಾರ್ಯ ನಿರ್ವಹಿಸುತ್ತಿದ್ದಲ್ಲಿ ಅವರ ಹೆಸರಿನೊಂದಿಗೆ ಮಾಹಿತಿ ನೀಡುವುದು; ಇಲ್ಲದಿದ್ದ ವೈದ್ಯರನು ಯಾವಾಗ ನೇಮಕ ಮಾಡಲಾಗುವುದು;</td><td>ಕರ್ತವ್ಯನಿರತ ವೈದ್ಯಾಧಿಕಾರಿಗಳ ವಿವರವಾದ ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ.<br><br>ನಿಯಮಾನುಸಾರ ನೇರ ನೇಮಕಾತಿ, ಮುಂಬಡ್ತಿ, ಗುತ್ತಿಗೆ ಆಧಾರದಡಿ, ವರ್ಗಾವಣೆ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುವುದು.</td></tr>
<tr><td>ಇ)</td><td>ಇತ್ತೀಚೆಗೆ ಹೃದಯಾಘಾತ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಹೃದಯ ಸಂಬಂಧಿ ಖಾಯಿಲೆಗೆ ನುರಿತ ವೈದ್ಯರು (Specialist) ಕಾರ್ಯ ನಿರ್ವಹಿಸುತ್ತಿದ್ದಾರೆಯೇ; ಇಲ್ಲದಿದ್ದಲ್ಲಿ, ಹೃದಯಘಾತೆ ಖಾಯಿಲೆಗೆ ಸಂಬಂಧಿಸಿದ ವೈದ್ಯರನು ಯಾವಾಗ ನೇಮಕ ಮಾಡಲಾಗುವುದು; (ನಿಖರ ಮಾಹಿತಿ ನೀಡುವುದು)</td><td>ಹೃದಯ ಖಾಯಿಲೆಗೆ ಸಂಬಂಧಿಸಿದಂತೆ ಸದರಿ ತಜ್ಞತೆಯ ಹುದ್ದೆಯು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ ಆಳಂದ ಇಲ್ಲಿ ಮಂಜೂರಾಗಿರುವುದಿಲ್ಲ ಬದಲಾಗಿ, ಸಾರ್ವಜನಿಕ ಆಸ್ಪತ್ರೆ ಆಳಂದ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜನರಲ್ ಮೆಡಿಸಿನ್ ತಜ್ಞತೆಯ ವೈದ್ಯರೇ ಹೃದಯ ಸಂಬಂಧಿತ ಖಾಯಿಲೆಗೆ ತುರ್ತು ಚಿಕಿತ್ಸೆ ನೀಡುತ್ತಿರುತ್ತಾರೆ.</td></tr>
<tr><td>ಈ)</td><td>ಬಾಣಂತಿಯವರ ಹೆರಿಗೆಗೆ ಸಂಬಂಧಿಸಿದ ಎಷ್ಟು ಮಹಿಳಾ ವೈದ್ಯರು ಕಾರ್ಯ ನಿರ್ವಹಿಸುತ್ತಿದಾರೆ; ಇಲ್ಲದಿದ್ದಲ್ಲಿ ಇವರುಗಳನ್ನು ಯಾವಾಗ ನೇಮಕ ಮಾಡಲಾಗುವುದು?</td><td>ಸಾರ್ವಜನಿಕ ಆಸ್ಪತ್ರೆ, ಆಳಂದ ಇಲ್ಲಿನ ಮಹಿಳಾ ಸ್ತ್ರೀರೋಗ ತಜ್ಞರ ವಿವರ ಈ ಕೆಳಕಂಡಂತಿದೆ.
<table>
<tr><th>ಹುದ್ದೆ</th><th>ಮಂಜೂರು</th><th>ಕಾರ್ಯನಿರತ</th><th>ಖಾಲಿ ಹುದ್ದೆ</th></tr>
<tr><td>ಮಹಿಳಾ ಸ್ತ್ರೀರೋಗ ತಜ್ಞರು</td><td>2</td><td>1</td><td>1</td></tr>
</table>
ನಿಯಮಾನುಸಾರ ನೇರ ನೇಮಕಾತಿ, ಮುಂಬಡ್ತಿ, ಗುತ್ತಿಗೆ ಆಧಾರದಡಿ, ವರ್ಗಾವಣೆ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುವುದು.</td></tr>
</table>

**ಆಕುಕ 27 ಹೆಚ್ ಎಸ್ ಡಿ 2025.**

**(ದಿನೇಶ್ ಗುಂಡೂರಾವ್)**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ -1

100 ಹಾಸಿಗೆಯುಳ್ಳ ತಾಲೂಕ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆಳಂದ (11.03.2025)

| ಕ್ರ ಸಂ. | ಹುದ್ದೆಗಳ ಹೆಸರು | ಮಂಜೂರು | ಕಾರ್ಯನಿರತ | ಖಾಲಿ | ಷರಾ |
|---|---|---|---|---|---|
| 1 | ತುರ್ತು ಚಿಕಿತ್ಸಾ ವೈದ್ಯಾಧಿಕಾರಿಗಳು | 4 | 3 | 1 | 1 ಗುತ್ತಿಗೆ |
| 2 | ಜನರಲ್ ಮೆಡಿಸನ್/ ಫಿಜಿಷಿಯನ್ | 1 | 1 | 0 | 1 ಗುತ್ತಿಗೆ |
| 3 | ಜನರಲ್ ಸರ್ಜನ | 1 | 1 | 0 | . |
| 4 | ಕೀಲು ಮೂಳೆ ತಜ್ಞರು | 1 | 1 | 0 | - |
| 5 | ಕಿವಿ, ಮೂಗು ಗಂಟಲು ತಜ್ಞರು | 1 | 1 | 0 | . |
| 6 | ಚರ್ಮ ರೋಗ ತಜ್ಞರು | 1 | 0 | 1 | . |
| 7 | ಸ್ತ್ರೀ ರೋಗ ತಜ್ಞರು | 2 | 2 | 0 | ಒಬ್ಬ ತಜ್ಞರು ದಿನಾಂಕ 23/08/2023 ರಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ |
| 8 | ಮಕ್ಕಳ ತಜ್ಞರು | 1 | 1 | 0 | - |
| 9 | ಅರವಳಿಕೆ ತಜ್ಞರು | 1 | 1 | 0 | 1 ಗುತ್ತಿಗೆ |
| 10 | ನೇತ್ರ ತಜ್ಞರು | 1 | 1 | 0 | . |
| 11 | ದಂತ ಆರೋಗ್ಯ ವೈದ್ಯಾಧಿಕಾರಿಗಳು | 2 | 2 | 0 | - |
| 12 | ಸಹಾಯಕ ಆಡಳಿತ ಅಧಿಕಾರಿಗಳು | 1 | 1 | 0 | . |
| 13 | ಕಛೇರಿ ಅಧೀಕ್ಷಕರು | 1 | 1 | 0 | . |
| 14 | ಶುಶ್ರೂಷಕರು ಅಧೀಕ್ಷಕರ ದರ್ಜೆ 2 | 1 | 0 | 1 | . |
| 15 | ಹಿರಿಯ ಫಾರ್ಮಾಸಿಸ್ಟ | 1 | 0 | 1 | . |
| 16 | ಕಿರಿಯ ಫಾರ್ಮಾಸಿಸ್ಟ | 2 | 0 | 2 | . |
| 17 | ಹಿರಿಯ ಪ್ರಯೋಗ ಶಾಲಾ ತಂತ್ರಜ್ಞರು | 1 | 0 | 1 | . |
| 18 | ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು | 2 | 2 | 0 | . |
| 19 | ಕ್ಷ-ಕಿರಣ ತಂತ್ರಜ್ಞರು | 1 | 0 | 1 | . |
| 20 | ಶುಶ್ರೂಷಕರು | 16 | 16 | 0 | . |
| 21 | ಪ್ರಥಮ ದ ಸಹಾಯಕರು | 2 | 2 | 0 | . |
| 22 | ಕಿ.ಆರೋಗ್ಯ ಸಹಾಯಕ ( ಪುರುಷ ) | 2 | 2 | 0 | . |
| 23 | ಕಿ.ಆರೋಗ್ಯ ಸಹಾಯಕಿ ( ಮಹಿಳೆ ) | 2 | 1 | 1 | . |
| 24 | ದ್ವಿತೀಯ ದ ಸಹಾಯಕರು | 4 | 4 | 0 | . |
| 25 | ಕ್ಲರ್ಕ ಕಮ್ ಟೈಪಿಸ್ಟ | 1 | 0 | 1 | . |
| 26 | ವಾಹನ ಚಾಲಕರು | 2 | 2 | 0 | . |
| 27 | ಗ್ರೂಪ್ "ಡಿ" | 34 | 23 | 11 | 13 ಜನ ಗ್ರೂಪ್-ಡಿ ಸಿಬ್ಬಂದಿಯವರು ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಇವರ ಅವಧಿ ದಿನಾಂಕ31-03-2025 ರಂದು ಮುಗಿಯುತ್ತದೆ. |
| | ಒಟ್ಟು | 89 | 68 | 21 | |

ವೈದ್ಯಾಧಿಕಾರಿಗಳು
ಸರ್ಕಾರಿ ಸಾರ್ವಜನಿಕ ಆಸ್ಪತ್ರೆ
ಆಳಂದ ಕಲಬುರಗಿ

Scanned with CamScanner

Scanned with CamScanner

ಅನುಬಂಧ - 2

**Specialist Doctors Name Wise Details**

| SL NO | Name of the Institution | Name of the Post | Name of the Doctor | Remarks |
|---|---|---|---|---|
| 1 | G.H. Aland | Gen. Med | Dr.Nilesh Patil | On Contract Basis |
| 2 | G.H. Aland | Gen. Surgeon | Dr.Pramod Sangolgi | |
| 3 | G.H. Aland | Orthopedic | Dr.Amar | |
| 4 | G.H. Aland | Opthalmology | Dr.Sunil | |
| 5 | G.H. Aland | Gynaecologist | Dr.Priyanka S | Rejoining Permission submitted to Commissioner Office (Unthorised Absent) |
| 6 | G.H. Aland | Gynaecologist | Dr.Rajashree | |
| 7 | G.H. Aland | Anesthesia | Dr.Swathi Ganga | On Contract Basis |
| 8 | G.H. Aland | ENT Spl | Dr.Najima | |
| 9 | G.H. Aland | Skin Spl | Vacant | |
| 10 | G.H. Aland | Pediatrician | Dr.Umakanth | |
| 11 | G.H. Aland | Dental Health officer | Dr.Swetha | |
| 12 | G.H. Aland | Dental Health officer | Dr.Lilakshi | |

Scanned with CamScanner